ಕಾಣ್ತಿದಾರೆ...' ಮಾತಾಡಿದ್ದು, ದೇವಸ್ಥಾನದ ಮುಂದೆ ಕುಳಿತು ಹೂವು, ಹಣ್ಣು, ಕಾಯಿ, ಊದುಬತ್ತಿ, ವೀಳ್ಯೆದೆಲೆ ಎಲ್ಲವನ್ನು ಬಿದಿರ ತಟ್ಟೆಯಲ್ಲಿ ಜೋಡಿಸಿಟ್ಟು ಮಾರುತ್ತಿದ್ದ ಮಧ್ಯ ವಯಸ್ಸಿನ ದಢೂತಿ ಹೆಂಗಸು ಹೂವಮ್ಮ ಅವಳೆಂದಳು. 'ಪಾಪೂ, ಪ್ರಸಾದಪ್ಪ ತೋಟದಲ್ಲಿ ನಿಮ್ಮನ್ನ ಯಾವಾಗ ಮಾತಾಡಿಸಿದ್ರವ್ವಾ...? ಹೌದೇನೆ ಗಂಗೀ? ಅಲ್ಲಿಗೆ ನೀವ್ಯಾಕೆ ಪ್ರಸಾದಪ್ಪನ ಜೊತೆಗೆ ಹೋದ್ರೀ?'

ಗಂಗೆಗೆ ಎದೆಯಲ್ಲಿ ಚೇಳು ಕುಟುಕಿದ ಅನುಭವವಾಯಿತು.

'ನೀ ಅದೇನೂ ಮಾತಾಡ್ತಿರಾ... ನಂಗೆ ಅರ್ಥವಾಗದು... ದೊಡ್ಡವರ ಬಗ್ಗೆ ಹೀಂಗೆಲ್ಲಾ ಕಟಕಿ ಮಾತಾಡಬಾರ್ದವ್ವಾ...'

'ಬಿಡು ಗಂಗೆ... ನಂಗೆಲ್ಲಾ ಗೊತ್ತೈತೆ... ಪ್ರಸಾದಪ್ಪನ್ನ ಮಗೀನಿಂದ ಕಂಡೋಳು ನಾನು... ಅವ್ರಿಗೇನೊ ಕಷ್ಟ ಇದೆ... ಎದೆ ಮೇಲೆ ಕೈ ಇಟ್ಟುಕೊಳ್ಳೋ ರೂಢಿ ಹಿಂದೆ ಇರ್ಲೇ ಇಲ್ಲ... ಈಚೆಗೆ ಆರೇಳು ವರ್ಷಗಳಿಂದ ಯಾಕೊ ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದಾರೆ... ಏನು ನೋವೊ, ಏನು ಕಥೆಯೊ...? ಆಗ್ಲಿಂದ ಪ್ರಸಾದಪ್ಪ ಬೀಳಾಗಿ ಹೋದ್ರು... ಒಳ್ಳೆ ಬಿದಿರುಗೊಂಬೆ ಹಾಗೆ ಬಿಟ್ಟಿದ್ದಾರೆ... ಈ ದಿನ ಮಾತ್ರ ತುಂಬ ಚನ್ನಾಗಿ ಕಾಣ್ತಿದಾರೆ... ನಿನ್ನ ಮಗಳು ಹೇಳೂದು ನಿಜ... ಪ್ರಸಾದಪ್ಪ ಇಷ್ಟೂ ದಿನ ಇದ್ದುದೇ ಬೇರೆ... ಈ ದಿನ ಕಾಣ್ತರೋದೇ ಬೇರೆ... ನಂಗ್ಯಾಕೆ ಇದೆಲ್ಲಾ!?... ಬಿಡವ್ವ... ಮಾಡ್ದೋರ ಪಾಪ ಆಡ್ದೋರ ಮೇಲೆ ಅಂತ...! ನಂಗ್ಯಾಕೆ?... ಹೋಯ್ತೀನಿ... ನಂಗೆ ಟೇಂ ಆಯ್ತು... ಪೌಜು ನೋಡೊಕೆ ಹೋಗ್ ಬೇಕು... ನಾವು ಚಿಕ್ಕೋರಿದ್ದಾಗ ಈ ಪೌಜಿನ ಮೆರವಣಿಗೆ ಇನ್ನೂ ಚೆನ್ನಾಗಿರ್ತಿತ್ತು... ಆಗ ಮಾರಾಜ್ರು ಅಂಬಾರಿಲಿ ಕೂತು ದೇವ್ರ ಹಾಗೆ ದರ್ಶನ ಕೊಡ್ತಿದ್ರು...

ಆ ಕಾಲ್ದಲ್ಲಿ ನೋಡಿದ ಕಣ್ಣಿಗೆ ಈಗ ಏನೂ ಛಂದ ಅನ್ನೋದಿಲ್ಲ... ಆದ್ರೆ ಅಭ್ಯಾಸ ಮಾಡಿಕೊಂಡು ಬಿಟ್ಟಿದ್ದೀನಿ... ಪ್ರತೀ ವರ್ಷ ಪೌಜು ನೋಡಾಕೆ ಹೋಗೇ ಹೋಗ್ತೀನಿ... ನಾನು ಚಿಕ್ಕೊಳಾಗಿದ್ದಾಗ ನಮ್ಮ ತಾಯಿ ನೋಡ್ತಿದ್ರಂತೆ... ಆಗ... ದೊಡ್ಡ ರಾಜ್ರು ಕೃಷ್ಣದೇವರಾಯ್ರು ಮತ್ತು ಅವರ ತಮ್ಮ ನರಸಿಂಹರಾಜ ಒಡೆಯರು, ಪುಟ್ಟ ಹುಡುಗ ಜಯಚಾಮರಾಜ ಒಡೆಯರು ಮೂರು ಜನ ಚಿನ್ನದ ಅಂಬಾರಿಲಿ ಕೂತು ಬನ್ನಿಮಂಟಪಕ್ಕೆ ಹೋಗಿ ಬನ್ನಿ ಪೂಜೆ ಮಾಡಿ ರಾತ್ರಿ ಹಿಂದಿರುಗುತ್ತಿದ್ರಂತೆ. ಬಿಡವ್ವಾ, ಇದೆಲ್ಲಾ ನೆಪ್ಪು ಮಾಡಿಕೊಂಡು ಉಪಯೋಗ ಏನು...? ಈಗ ಹೋಗಿ ನೋಡೋದು ನೆಂಟರು, ಮೊಮ್ಮಕ್ಕಳ ಬಲವಂತಕ್ಕಷ್ಟೇ. ಎಲ್ರೂ ನಂಗೋಸ್ಕರ ಕಾಯ್ತಿದಾರೆ... ಮನೆಗೆ ಹೋಗಿ ಊಟ ಮಾಡಿ ಹೊಂಟುಬಿಡಬೇಕು... ಬತ್ತೀನಿ' ಎಂದು ಮಾಡುವ ನೋವು ಮಾಡಿ ಹೊರಟುಬಿಟ್ಟಳು. ಹೊರಡುವ ಮುಂಚೆಯೂ ಮತ್ತೆ ಚುಚ್ಚದಿರಲಿಲ್ಲ.

(ಸಶೇಷ)

ಖ್ಯಾತ ಕಥೆಗಾರ್ತಿ

**ಗೀತಾ ಬಿ.ಯು.**

ಅವರ

# ಹೊಸ ಧಾರಾವಾಹಿ

ಇಬ್ಬರು ಮುದ್ದಾದ ಮಕ್ಕಳನ್ನು ಪಡೆದು ಗಂಡ ಅತ್ತೆ–ಮಾವನವರೊಂದಿಗೆ ಯಾವುದೇ ಕೊರತೆ ಇಲ್ಲದಂತೆ ತುಂಬು ಸಂಸಾರದ ನೊಗ ಹೊತ್ತರೂ 'ಅವಳು' ಬದುಕಿನಲ್ಲಿ ಸಂತೃಪ್ತಿ ಕಾಣಲೇ ಇಲ್ಲ. ಹಾಗಿದ್ದರೆ 'ಅವಳ' ಬದುಕಿನ ಒಳಗುದಿ ಏನು?

ಕ್ಷಣ ಕ್ಷಣವೂ ಕುತೂಹಲ ಕೆರಳಿಸುವ ಹೊಚ್ಚ ಹೊಸ ಸಾಮಾಜಿಕ ಕಥಾನಕ.

# ಇರುವುದೆಲ್ಲವ ಬಿಟ್ಟು...



## ಶೀಘ್ರ ಆರಂಭ